PCR 4/2023
PW.1

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

| | |
|---|---|
| ಸಾಕ್ಷಿಯ ಹೆಸರು | : ಶ್ರೀ ಪ್ರಕಾಶ ಶಂಕರ ವಡ್ಡರ |
| ತಂದೆಯ ಹೆಸರು | : ಶ್ರೀ ಶಂಕರ ವಡ್ಡರ |
| ವಯಸ್ಸು | : 57 ವರ್ಷ |
| ಉದ್ಯೋಗ | : ಶಿಕ್ಷಕರು, ಮರಾಠಿ ಶಿಕ್ಷಣ ಅಮಟೆ, ತಾಃಖಾನಾಪೂರ |
| ವಾಸ್ತವ್ಯ | : ಖಾನಾಪೂರ |
| ದಿನಾಂಕ | : 04-11-2023 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

<u>ಕಲಂ **200** ಸಿ.ಆರ.ಪಿ.ಸಿ ಅಡಿ ಸ್ವಪ್ರಮಾಣೀಕೃತ ಹೇಳಿಕೆ</u>

ನಾನು ಈಗ ಮರಾಠಿ ಹಿರಿಯ ಪ್ರಾಥಮಿಕ ಶಾಲೆ ಅಮಟೆಯಲ್ಲಿ ಮುಖ್ಯ ಶಿಕ್ಷಕನೆಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಹಿಂದೂ ವಡ್ಡರ ಜಾತಿಗೆ ಸೇರಿದವರಾಗಿದ್ದು, ನಾನು ಪರಿಶಿಷ್ಟ ಜಾತಿಗೆ ಸೇರಿದ್ದು ಇರುತ್ತದೆ. ನಾನು ಸಧ್ಯ ನಿಂಗಾಪೂರ ಓಣಿ ಖಾನಾಪೂರದಲ್ಲಿ ವಾಸ ಮಾಡುತ್ತಿದ್ದೇನೆ.

2. ಪ್ರಕಾಶ ಶಿವಮೂರ್ತಿ ಹೊಸಮನಿ ಯವರು ಖಾನಾಪುರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಛೇರಿಯಲ್ಲಿ ವ್ಯವಸ್ಥಾಪಕರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದು, ಕಳೆದ 10 ವರ್ಷಗಳ ಹಿಂದೆ ನನಗೆ ಸದರಿ ಪ್ರಕಾಶ ಹೊಸಮನಿ ಯವರ ಪರಿಚಯವಿರುತ್ತದೆ. ಸದರಿಯವರು ನನ್ನ ಮತ್ತು ನನ್ನ ಮಗನಾದ ರಮೇಶನ ವಿರುದ್ಧ ಖಾನಾಪುರ ಪೋಲೀಸ ಠಾಣೆಯಲ್ಲಿ ದಿಃ 19.06.2022 ರಂದು ದೂರು ನೀಡಿದ್ದು, ನಾನು ಮತ್ತು ನನ್ನ ಮಗ ಸೇರಿ ಸದರಿ ಪ್ರಕಾಶರವರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದು ಸುಳ್ಳು ದೂರು ನೀಡಿರುತ್ತಾರೆ.

ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.